ಅವನೊಳಗಿನ ಸೆಳೆತ ಹೆಚ್ಚಾಯ್ತು. ಮತ್ತೇನೂ ಅನ್ನಲಿಲ್ಲ.

'ನಿಮಗ ಶರಬತ್ತ ಮಾಡತೇನಿ ಬರ್‍ರಿ...'

ಆಕೆ ಒಳ ಹೋಗುತ್ತಿದ್ದಂತೆ ಬೆನ್ನಿಗಂಟಿಕೊಂಡು ಇವನು ಒಳನಡೆದ. ಅಡುಗೆಮನೆಯ ನಾಲ್ಕು ಗೋಡೆಯಲ್ಲಿ ಒಂದು ಭಾಗದ ಗೋಡೆಯನ್ನ ಆಳೆತ್ತರದಲ್ಲಿ ಕಟ್ಟಿದ್ದರು. ಇಬ್ಬರು ನಿಲ್ಲಬಹುದು... ಮೂರನೆಯವರು ಬಂದರೆ ಅತ್ತಿತ್ತ ಸರಿದಾಡಲೂ ಸಾಧ್ಯವಾಗಲಾರದಷ್ಟು ಸಣ್ಣ ಕೋಣೆ. ಮನೆಯವರೆಲ್ಲ ಹುಸಿಕಟ್ಟೆಯ ಮೇಲೆ ಅದು ಇದು ಮಾತಾಡತಾ... ಗೋಧಿಯ ಗೋಲಿ ತಿರುವುತ್ತಾ, ಮಸೂಟಕ್ಕೆ ಬೇಕಾದ ಕಡಬು, ಸಂಡಿಗಿಗಳಿಗೆ ಕಲರ್ ಹಾಕುವ ಬಗ್ಗೆ ಮಾತಾಡುತ್ತಿದ್ದರು.

'ನಿಮಗ ಇನ್ನೊಂದ ಹುಡುಗಿ ಕೂಟ ಅಫೇರ್ ಐತೆಂತ ಖರೇವೇನು?...'

'....!'

'ಭಾಳ ಕುಡೀತಿರಂತ... ಚಿತ್ತಾಗಿ ಎಲ್ಲಿ ಬೇಕಲ್ಲಿ ಬೀಳತೀರಂತ?... ನನ್ನ ಪ್ರಪಂಚ ಸಣ್ಣದು ಖರೇ... ನಮ್ಮ ಅವ್ವ ಅಪ್ಪನ ಸಮಂದ ನಾ... ಬ್ಯಾಡ ಬಿಡ್ರೀ ಅದೆಲ್ಲ ಯಾಕಿಗ... ಅವರ ದೆಸಿಯಿಂದ ನಾ ನಿಮ್ಮನ್ನ ನಂಬತೇನಿ... ತಗೋರಿ ಶರಬತ್ತ.'

ಕಳಾಹೀನನಾದಂತೆ ತಲೆತಗ್ಗಿಸಿ ನಿಂತಿದ್ದವ ಸಟಕ್ಕನೆ ಮುಖ ಮೇಲೆತ್ತಿ. 'ಈ ಮೊಬೈಲ್ ತಗೋ ನಾ ರಾತ್ರಿಗೆ ಎಲ್ಲಾ ಡಿಟೇಲಾಗಿ ಹೇಳತೀನಿ' ಒತ್ತಾಯದಿಂದಲೇ ಅವಳ ಕೈಗಿಟ್ಟ. ಖಾಲಿ ಲೋಟ ಅಡ್ಡಗೋಡೆಯ ಮೇಲಿಟ್ಟು 'ನಾ ಹೊಕ್ಕೇನಿ. ರಾತ್ರಿಗೆ ಫೋನ್ ಮಾಡತೀನಿ' ಇನ್ನೇನೋ ಕೇಳಬೇಕೆಂದಿದ್ದವಳ ಕಡೆಗೊಮ್ಮೆ ನೋಡಿ ನಕ್ಕು ವಾರಪಡಸಾಲೆಯ ಹಾದು ಹುಸಿಕಟ್ಟೆಗೆ ಹೋಗಿ ನಿಂತ. ಅವನೊಡನೆ ಬಂದಿದ್ದ ಗೆಳೆಯ ಮತ್ತು ಅಲ್ಲಿ ಕುಳಿತಿದ್ದ ನಾಕಾರು ಹೆಣ್ಣುಮಕ್ಕಳಿಗೆ ಶರಬತ್ತು ಕೊಟ್ಟು, ಅಲ್ಲೇ ತುದಿಕಟ್ಟೆಯ ಮೇಲೆ ಕುಳಿತು ಗೋಲಿ ಹೊಸೆಯತೊಡಗಿದಳು. ಬಂದಿದ್ದ ಗೆಳೆಯನೊಡನೆ ಹೊರಟು ನಿಂತಾಗ ಶಾರದೆಯ ತಾಯಿ ಬಿಸಿಲು ತಗ್ಗಿಸಿಕೊಂಡು ಹೋಗೆಂದೂ, ಅಷ್ಟರಲ್ಲಿ ಶಾರದಾಳ ಅಪ್ಪನೂ ಬರುವನೆಂದು ಹೇಳಿದಳು. 'ಹಳಿಯಾಳದ ಬೀಗರ ಮನೆಗೆ ಹೋಗಿ ಕಾರ್ಡ ಕೊಟ್ಟು ಗಣೇಶಗುಡಿಯ ಮಾವನ ಮನೆಯಲ್ಲಿ ಮುಕ್ಕಾಮ ನಿಲ್ಲುವುದಿದೆ' ಎಂದು ಹೇಳಿದಾಗ ಸುಮ್ಮನಾದರು. ಬೈಕು ಹತ್ತಿದ ಮೇಲಾದರೂ ಒಮ್ಮೆ ತನ್ನ ಕಡೆಗೆ ನೋಡಿದರೆ ಸಾಕು, ಕಣ್ಣಲ್ಲೇ ವಿನೀತಳಾಗಿ ಕ್ಷಮೆ ಕೇಳುತ್ತಿದ್ದಳೇನೋ... ತಲೆ ಎತ್ತಲಿಲ್ಲ ಆಸಾಮಿ. ಮಾತಿನ ತೂಕವೂ ತಪ್ಪಿ ಆಡಬಾರದ ಮಾತನ್ನೆಲ್ಲ ಆಡಿ, ಕೇಳಬಾರದ ಸಂಗತಿಗಳನ್ನೆಲ್ಲ ಕೇಳಿ ಮನಸಿಗೆ ನೋವು ಮಾಡಿದೆನೇನೋ ಎಂಬ ಅಳುಕೊಂದು ಆಕೆಯನ್ನು ಚಿವುಟತೊಡಗಿತ್ತು.

ಆ ಸೆಲ್‌ಫೋನ್ ತುಂಬಾ ಅವನವೇ ಫೋಟೊಗಳು ತುಂಬಿಕೊಂಡಿದ್ದವು. ದಾರಿಯಲ್ಲಿ ಬರುವಾಗ ಅಲ್ಲಲ್ಲಿ ನಿಂತು ತನಗೆ ತಾನೇ ಕ್ಲಿಕ್ಕಿಸಿಕೊಂಡ ಆ ಚಿತ್ರಗಳಲ್ಲಿ ಇವಳು ನೋಡುತ್ತಾಳೆಂಬ ಕಲ್ಪನೆಯಿತ್ತು. ಅದಕ್ಕಾಗಿ ಕಿರುನಗೆಯ ಮುದ ಅವನ ಮುಖದಲ್ಲಿ ವಿಶೇಷವಾದ ಕಾಂತಿಯನ್ನೇ ನೀಡಿತ್ತು. ಬಹುಶಃ ಆಕೆ ಒರಟಾಗಿ ನಡೆದುಕೊಳ್ಳದಿದ್ದರೆ ಈ ಮಂದಹಾಸದಲ್ಲೂ ಕೃತ್ರಿಮತೆಯನ್ನು ಕಾಣುತ್ತಿದ್ದಳೇನೋ... ಇವಳ ಮಾತಿಗೆ ಪೆಚ್ಚಾದ ಅವನ ನಡವಳಿಕೆ ಹಿಡಿಸಿತು. ಅದಕ್ಕೆ ಇರಬೇಕು ಅವಳೊಮ್ಮೆ ಸಾರಿ ಕೇಳಬೇಕೆಂದು ಚಡಪಡಿಸುತ್ತಿರುವುದು. ಗಳಿಗೆಗಳು ಯುಗಗಳಾದಂತೆ ಮಾರುದ್ದದ ಮುಗಿಲ ಮೇಲಿದ್ದ ಸೂರ್ಯ ಬಾಗದಂತೆ ದಿನವನ್ನು ಹಿಡಿದು ನಿಲ್ಲಿಸಿದ್ದಾನೆ ಎಂಬಷ್ಟು ವಿಲಂಬವಾಗಿತ್ತು ಹೊತ್ತು.